

## ರಾಕಿಂಗ್ ರಾಘವ!

'ಸತ್ಯ ಇನ್ ಲವ್', 'ಲಕ್ಕಿ' ಚಿತ್ರಗಳ ನಿರ್ದೇಶಕ ರಾಘವ ಲೋಕಿ ಅವರ ಹೊಸ ಚಿತ್ರ ಸೆಟ್ಟೇರಿದೆ. ಸಿನಿಮಾದ ಹೆಸರು 'ಎ ಸೆಕೆಂಡ್ ಹ್ಯಾಂಡ್ ಲವರ್'. ಲೋಕಿ ಅವರ ಹಿಂದಿನ ಎರಡು ಸಿನಿಮಾಗಳ ನಾಯಕ ಶಿವರಾಜ್ ಕುಮಾರ್. ಈ ಚಿತ್ರದಲ್ಲಿ ನಾಯಕ ಬದಲಾಗಿದ್ದಾನೆ. ಅಷ್ಟು ಮಾತ್ರವಲ್ಲ, ಲೋಕಿ ಅವರ ಹೆಸರೂ ಬದಲಾಗಿದೆ. 'ಸೆಕೆಂಡ್ ಹ್ಯಾಂಡ್ ಲವರ್' ನಾಯಕನಾಗಿ ಅಜೇಯ್ ರಾವ್ ನಟಿಸುತ್ತಿದ್ದರೆ, ಲೋಕಿ ತಮ್ಮ ಹೆಸರನ್ನು ರಾಘವ್ ಮರಸೂರ್ ಎಂದು ಬದಲಿಸಿಕೊಂಡಿದ್ದಾರೆ.

ಮಂಜುನಾಥ್ 'ಸೆಕೆಂಡ್ ಹ್ಯಾಂಡ್ ಲವರ್'ನ ನಿರ್ಮಾಪಕರು. ನಟ ದರ್ಶನ್ ಅವರು ಟ್ರೇಲರ್ ಬಿಡುಗಡೆ ಮಾಡುವುದರೊಂದಿಗೆ ರಾಘವ ಅವರ ಹೊಸ ಚಿತ್ರಕ್ಕೆ ಕಳೆದ ವಾರ ಚಾಲನೆ ದೊರೆಯಿತು. ರಾಘವ್ ಸಿನಿಮಾಕ್ಕೆ ಬರುವ ಮೊದಲೇ ಅವರೊಂದಿಗಿನ ತಮ್ಮ ಸ್ನೇಹವನ್ನು ದರ್ಶನ್ ನೆನಪಿಸಿಕೊಂಡರು. ಗೆಳೆಯನ ಮೇಲಿನ ಪ್ರೀತಿಯಿಂದ ಈ ಕಾರ್ಯಕ್ರಮಕ್ಕೆ ಬಂದುದಾಗಿ ಅವರು ಹೇಳಿದರು. ದರ್ಶನ್ ಅವರ ಆಗಮನ ಅಜೇಯ್ ಅವರಲ್ಲೂ ಉತ್ಸಾಹ ಉಕ್ಕಿಸಿದಂತಿತ್ತು. ಹೇಳಿ ಕೇಳಿ ಅವರು ಸಿನಿಮಾದಲ್ಲಿ ರಾಕ್ ಸಿಂಗರ್!

'ಟ್ರೇಲರ್ ಇದ್ದಂತೆ ಸಿನಿಮಾ ಇರುವುದಿಲ್ಲ' ಎನ್ನುವ ನಿರ್ದೇಶಕರ ಮಾತಿಗೆ ಸಂಗೀತ ನಿರ್ದೇಶಕ ಗುರುಕಿರಣ್ ದನಿಗೂಡಿಸಿದರು. 'ಇಡೀ ಸಿನಿಮಾದಲ್ಲಿ ರಾಕ್ ಸಂಗೀತ ಅನುರಣಿಸಲಿದೆ. ಆ ಕಾರಣದಿಂದಾಗಿ ನನ್ನ ಕೆಲಸ ಈ ಚಿತ್ರದಲ್ಲಿ ಸಾಕಷ್ಟು ಇರಲಿದೆ' ಎಂದು ಗುರು ಹೇಳಿದರು. ಅಂದ ಹಾಗೆ, ಮುಂಬಯಿ ಹುಡುಗಿ ಅನಿಷಾ ಚಿತ್ರದ ನಾಯಕಿ. ಉತ್ಸಾಹಿಗಳ ತಂಡದ ಜೊತೆಯಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ದೊರೆತ ಧನ್ಯತೆ ಆಕೆಯ ಮಾತುಗಳಲ್ಲಿತ್ತು.



## ಹೊಸ ಮಿಂಚು

ತಲೆಯ ತುಂಬಾ ಕೂದಲು. ಅದರ ಮುಂದುವರಿದ ಭಾಗವಾಗಿ ಮುಖದ ಮೇಲೂ ಗಡ್ಡ–ಮೀಸೆ. ಗಡ್ಡದ ಈ ಟ್ರೇಡ್‌ಮಾರ್ಕ್ ಹೆಸರಿನೊಂದಿಗೂ ಸೇರಿಕೊಂಡಿದೆ; ಅವರು 'ಗಡ್ಡ ವಿಜಿ' ಎಂದೇ ಸ್ನೇಹಿತರ ವಲಯದಲ್ಲಿ ಜನಪ್ರಿಯರು. ಈ ವಿಜಿ ಈಗ ಕನ್ನಡ ಚಿತ್ರರಸಿಕರ ವಲಯದಲ್ಲೂ ಪರಿಚಿತರು. ಅವರ ನಿರ್ದೇಶನದ 'ದ್ಯಾವ್ರೇ' ತೆರೆ ಕಂಡಿದೆ; ಈ ಚಿತ್ರದ ಮೂಲಕ ಭರವಸೆಯ ನಿರ್ದೇಶಕನೊಬ್ಬ ಕನ್ನಡ ಚಿತ್ರರಂಗಕ್ಕೆ ಸಿಕ್ಕಂತಾಗಿದೆ.

ಯೋಗರಾಜ ಭಟ್ ಮತ್ತು ಸೂರಿ ಕ್ಯಾಂಪಿನಲ್ಲಿ ಗುರ್ತಿಸಿಕೊಂಡಿರುವ ವಿಜಿ, ಮೊದಲ ಸಿನಿಮಾದಲ್ಲೇ ಗಮನ ಸೆಳೆದಿದ್ದಾರೆ. ಹಾಗೆ ನೋಡಿದರೆ, ಸಿನಿಮಾ ನಿರ್ದೇಶಿಸಬೇಕು ಎಂದು ಅವರು ಹಾತೊರೆದವರೇನಲ್ಲ. ಭಟ್ಟರ ಚಿತ್ರತಂಡದ ಚರ್ಚೆಗಳಲ್ಲಿ ಭಾಗವಹಿಸುತ್ತ, ಗುಂಪಿನಲ್ಲಿ ಒಬ್ಬರಾಗಿ ಕೆಲಸ ಮಾಡಿಕೊಂಡು ಇದ್ದವರು ವಿಜಿ. ಒಮ್ಮೆ ಯಾವುದೋ ಕಾರಣಕ್ಕಾಗಿ ಅವರು ಖಿನ್ನತೆಯಲ್ಲಿ ಮುಳುಗಿದ್ದೂ ಉಂಟು. ಆಗ, ಭಟ್ಟರೇ ಧೈರ್ಯ ತುಂಬಿದ್ದರು. 'ಒಳ್ಳೆಯ ಕಥೆ ಮಾಡು' ಎಂದು ಹುರಿದುಂಬಿಸಿದ್ದರು. ಹೀಗೆ ರೂಪುಗೊಂಡಿದ್ದು 'ದ್ಯಾವ್ರೇ' ಕಥನ. ಚಿತ್ರಕಥೆಯನ್ನು ನೋಡಿ, 'ಅದ್ಭುತವಾಗಿದೆ' ಎಂದು ಭಟ್ಟರು ಮೆಚ್ಚಿಕೊಂಡರೂ ವಿಜಿ ನಿರ್ದೇಶಕರಾಗಲು ಅಳುಕಿದ್ದರು. ಕೊನೆಗೆ ಗೆಳೆಯರ ಒತ್ತಾಸೆಯಿಂದ ನಿರ್ದೇಶಕರಾದರು. ಅದರ ಫಲಿತಾಂಶ ಈಗ ತೆರೆಯ ಮೇಲಿದೆ.

ಗಲ್ಲಾಪೆಟ್ಟಿಗೆ ಲೆಕ್ಕಾಚಾರ ಬದಿಗಿಟ್ಟು ನೋಡುವುದಾದರೆ– 'ದ್ಯಾವ್ರೇ' ಈಚಿನ ವರ್ಷಗಳಲ್ಲಿ ತೆರೆಕಂಡ ಉತ್ತಮ ಚಿತ್ರಗಳಲ್ಲೊಂದು. ನಿರ್ದೇಶಕ ಯೋಗರಾಜ ಭಟ್ಟರ ನಟನೆಯ ಪ್ರತಿಭೆಯನ್ನು ಅನಾವರಣಗೊಳಿಸಿರುವುದು ಸಿನಿಮಾದ ಇನ್ನೊಂದು ವಿಶೇಷ.

'ದ್ಯಾವ್ರೇ' ತೆರೆಕಂಡ ಸಂದರ್ಭದಲ್ಲೂ ವಿಜಿ ಅವರ ಗೊಂದಲಗಳು ತೀರಿಲ್ಲ. 'ಪ್ರೇಕ್ಷಕರನ್ನು ನಾನು ತುಂಬಾ ಅಳಿಸಿದೆನಾ? ಹಾಗೆ ಅಳಿಸುವ ಹಕ್ಕು ನನಗಿಲ್ಲದೆ?' ಎನ್ನುವ ಪ್ರಶ್ನೆಗಳನ್ನು ಅವರು ಕಾಡುತ್ತಿವೆ. ಚಿತ್ರದಲ್ಲಿನ ಕೆಲವು ತಾಂತ್ರಿಕ ಕೊರೆಗಳೂ ಅವರಿಗೆ ಕಾಣಿಸಿವೆ. 'ಹಳೆಯ ತಪ್ಪುಗಳನ್ನು ಮುಂದಿನ ಸಿನಿಮಾಗಳಲ್ಲಿ ಮಾಡುವುದಿಲ್ಲ' ಎನ್ನುವುದು ಅವರ ವಿನಯದ ಮಾತು.

■ ರಘು